2) ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ, ಬೆಂಗಳೂರು

3) ವೆಂಕಟೇಶ ಎಜುಕೇಷನ್ ಸೊಸೈಟಿ, ಬೆಂಗಳೂರು

ಈ) -ಹೌದು-

ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಹೊರ ದೇಶದಿಂದ ಪಡೆಯುತ್ತಿರುವ ಸಾಲ

2938 - ಶ್ರೀ ರಾಮದಾಸ್. ಎ. (ಕೃಷ್ಣರಾಜಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಿಗಾಗಿ ಹೊರದೇಶದಿಂದ ಪಡೆಯುತ್ತಿರುವ ಸಾಲ ಮತ್ತು ಸಹಾಯ ಧನ ಎಷ್ಟು? ಯಾವ ಯಾವ ದೇಶದಿಂದ ಈ ಸಾಲ ಮತ್ತು ಸಹಾಯಧನ ಪಡೆಯಲಾಗುತ್ತಿದೆ? ಈ ಸಾಲಕ್ಕೆ ಬಡ್ಡಿ ದರ ಎಷ್ಟು?*

ಆ) *ಈ ಸಾಲದ ಹಣವನ್ನು ಯಾವ ಯಾವ ಆಸ್ಪತ್ರೆಗಳಿಗೆ ಯಾವ ಯಾವ ರೂಪದಲ್ಲಿ ವಿರ್ಚು ಮಾಡಲು ಯೋಜಿಸಲಾಗಿದೆ?*

ಇ) *ಮೈಸೂರು ಚೆಲುವಾಂಬಾ ಕೆ.ಆರ್. ಆಸ್ಪತ್ರೆ ಮತ್ತು ಪಿ.ಕೆ. ಸ್ಯಾನಿಟೋರಿಯಂಗಳ ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳೇನು?*

ಈ) *ಕೆ.ಆರ್. ಆಸ್ಪತ್ರೆಯಲ್ಲಿ ಆಪಘಾತ, ನೆಫ್ರಾಲಜಿ ಮತ್ತು ನ್ಯೂರೋ ಸರ್ಜರಿ ವಿಭಾಗಗಳನ್ನು ತೆರೆಯಲು ಕೈಗೊಳ್ಳುತ್ತಿರುವ ಕ್ರಮಗಳೇನು?*

ಡಾ|| ಎ.ಬಿ. ಮಾಲಕರೆಡ್ಡಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗಾಗಿ ವಿದೇಶಗಳಿಂದ ಆರ್ಥಿಕ ಸಹಾಯವನ್ನು ಪಡೆದಿರುವುದಿಲ್ಲ. ಆದಾಗ್ಯೂ, 6 ಬೋಧನಾ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಕೆ.ಹೆಚ್.ಎಸ್.ಡಿ.ಪಿ. ಮುಖಾಂತರ ರೂ. 29.2 ಕೋಟಿಗಳನ್ನು ವಿಶ್ವಬ್ಯಾಂಕಿನ ಆರ್ಥಿಕ ಸಹಾಯ ಪಡೆಯಲಾಗುತ್ತಿದೆ.

ವಿಶ್ವಬ್ಯಾಂಕಿನ ಸಹಾಯವು ಶೇ.70 ರಷ್ಟು ಸಾಲದ ರೂಪದಲ್ಲಿ ಮತ್ತು ಶೇ.30 ರಷ್ಟು ಸಹಾಯಾನುಧಾನದ ರೂಪದಲ್ಲಿ ಭಾರತದ ಸರ್ಕಾರದ ಮುಖಾಂತರ ಬರುತ್ತದೆ. ಭಾರತ ಸರ್ಕಾರವು ಸಾಲದ ಮೇಲೆ ಶೇ.12.5 ರಷ್ಟು ವಾರ್ಷಿಕ ಬಡ್ಡಿಯನ್ನು ವಿಧಿಸುತ್ತದೆ.

ಆ) ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವ ಈ ಕೆಳಕಂಡ ಆಸ್ಪತ್ರೆಗಳ ಕಟ್ಟಡದ ಅಭಿವೃದ್ಧಿಗಾಗಿ ಸಿಬ್ಬಂದಿ ತರಬೇತಿ ಹಾಗೂ ಉಪಕರಣಗಳ ಪೂರೈಕೆಗಾಗಿ ಖರ್ಚು ಮಾಡಲು ಯೋಜಿಸಲಾಗಿದೆ.

1. ಕೆ.ಆರ್. ಆಸ್ಪತ್ರೆ 2. ವಿಕ್ಟೋರಿಯಾ ಆಸ್ಪತ್ರೆ 3. ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ 4. ವಾಣಿವಿಲಾಸ ಆಸ್ಪತ್ರೆ 5. ಚೆಲುವಾಂಬಾ ಆಸ್ಪತ್ರೆ 6. ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

೫) ಕೆ.ಹೆಚ್.ಎಸ್.ಡಿ.ಪಿ.ಯ ವಿಶ್ವಬ್ಯಾಂಕಿನ ನೆರವಿನೊಂದಿಗೆ ಚೆಲುವಾಂಬಾ ಆಸ್ಪತ್ರೆ ಮತ್ತು ಕೆ.ಆರ್. ಆಸ್ಪತ್ರೆ, ಮೈಸೂರು ಈ ಆಸ್ಪತ್ರೆಗಳನ್ನು ಅಭಿವೃದ್ಧಿ ಕಾರ್ಯದಲ್ಲಿ ಸೇರಿಸಲಾಗಿದೆ. ಆದರೆ, ಪಿ.ಕೆ.ಟಿ.ಬಿ. ಸ್ಯಾನಿಟೋರಿಯಂ, ಈ ಆಸ್ಪತ್ರೆಯನ್ನು ಈ ಯೋಜನೆಯಡಿಯಲ್ಲಿ ಸೇರಿಸಿರುವುದಿಲ್ಲ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ರೂ. (ಲಕ್ಷಗಳಲ್ಲಿ)

ಆಸ್ಪತ್ರೆಯ ಹೆಸರು	ಸಿವಿಲ್ ಕಾಮಗಾರಿ (ಅಂದಾಜು ಪೆಚ್ಚ)	ಉಪಕರಣ (ಅಂದಾಜು ಪೆಚ್ಚ)	ತರಬೇತಿ (ಅಂದಾಜು ಪೆಚ್ಚ)	ಒಟ್ಟು (ಅಂದಾಜು ಪೆಚ್ಚ)
1. ಕೆ.ಆರ್. ಆಸ್ಪತ್ರೆ	470.00	150.00	30.00	650.00
2. ವಿಕ್ಟೋರಿಯಾ	510.00	150.00	40.00	700.00
3. ಬೌರಿಂಗ್ ಮತ್ತು ಲೇಡಿ ಕರ್ಜನ್	520.00	150.00	30.00	700.00
4. ವಾಣಿವಿಲಾಸ	280.00	50.00	15.00	345.00
5. ಚೆಲುವಾಂಬಾ	150.00	50.00	15.00	215.00
6. ಕಿಮ್ಸ್ ಹುಬ್ಬಳ್ಳಿ	265.00	50.00	15.00	330.00

೬) ಕೆ.ಆರ್. ಆಸ್ಪತ್ರೆ ಅಪಘಾತ ವಿಭಾಗವನ್ನು ಸ್ಥಳಾಂತರಿಸಿ ಸುಸಜ್ಜಿತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನ್ಯೂರೋ ಸರ್ಜರಿ ತಜ್ಞರನ್ನು ನೇಮಕ ಮಾಡಲಾಗಿದೆ. ಹೊಸ ಹೊರರೋಗಿಗಳ ಕಟ್ಟಡದ ವಿಭಾಗದಲ್ಲಿ ನ್ಯೂರೋ ಸರ್ಜರಿಯ ವಿಭಾಗವನ್ನು ಕೂಡಲೇ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಈ ಆಸ್ಪತ್ರೆಯಲ್ಲಿ ನೆಫ್ರಾಲಜಿ ಮತ್ತು ಗ್ಯಾಸ್ಟ್ರೋಎಂಟ್ರಾಲಜಿ ವಿಭಾಗಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ರಾಜ್ಯದಲ್ಲಿ ವರ್ಲ್ಡ್ ಹೆಲ್ತ್ ಸಿಸ್ಟಮ್ಸ್ ಮೂಲಕ ನಡೆದಿರುವ ಅಭಿವೃದ್ಧಿ

2941 - ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ವರ್ಲ್ಡ್ ಹೆಲ್ತ್ ಸಿಸ್ಟಮ್ಸ್ ಮೂಲಕ ಜಿಲ್ಲಾವಾರು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 1999-2000 ಹಾಗೂ 2000-2001ರ ಸಾಲಿನಲ್ಲಿ ಮಂಜೂರಾತಿಯಾದ ಕಾಮಗಾರಿಗಳು ಯಾವುವು?*

2. *ಈ ಕಾಮಗಾರಿಗಳಿಗೆ ನಿಗದಿಪಡಿಸಲಾದ ಅಂದಾಜು ಮಂಜೂರಾತಿ ಹಣ ಎಷ್ಟು ಹಾಗೂ ಕಾಮಗಾರಿಗಳ ಪ್ರಗತಿಯ ವಿವರಗಳನ್ನು ನೀಡುವುದು? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)*